# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:21 ಸಂಪುಟ:4 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in


## ಬೆಳಕು

ಕಾಯುವ ಮೊದಲು ಕಾರ್ಯಪ್ರವೃತ್ತರಾಗುವುದು, ನಿರ್ಣಯಕ್ಕೆ ಬರುವ ಮುನ್ನ ಯೋಚಿಸುವುದು ಇವೆಲ್ಲ ನಮ್ಮ ಸುಗಮ ಭವಿಷ್ಯಕ್ಕೆ ನಾಂದಿಯಾಗಬಲ್ಲ ಸಂಗತಿಗಳು.

-By net

## Unbelievable facts.




-By net

## 'ನಗೆ ಹೊನಲು'




-By net

# 'ಯೋಜನಾ ರಹಿತ ನಗರೀಕರಣದಿಂದ ಪರಿಸರಕ್ಕೆ ಹಾನಿ'

ಅಗತ್ಯಕ್ಕಿಂತ ಹೆಚ್ಚಾಗಿ ಭೂಮಿಯನ್ನು ಪ್ರವಾಸೋದ್ಯಮ ಹೆಸರಿನಲ್ಲಿ ಅವ್ಯಾಹತವಾಗಿ ಬಳಕೆ ಮಾಡುತ್ತಿರುವದರಿಂದ ಪರಿಸರಕ್ಕೆ ಹಾನಿಯಾಗುತ್ತಿದೆ ಎಂದು ಬೆಂಗಳೂ-ರಿನ ಇಕ್ವೇಶನ್ಸ್ ಪ್ರವಾಸೋದ್ಯಮ ಕೇಂದ್ರದ ಕಾರ್ಯಕ್ರಮ ಸಂ-ಯೋಜಕಿ ನಿನೋ ಚಾರ್ಲ್ಸ್ ಕಳವಳ ವ್ಯಕ್ತಪಡಿಸಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಸ್ನಾತ್ತಕೋತ್ತರ ಪ್ರವಾಸೋದ್ಯಮ ವಿಭಾಗದ 'ಭುವನ ವಿಜಯ' ಸಭಾಂಗಣದಲ್ಲಿ ಆಯೋಜಿಸಿದ ವಿಶ್ವ ಪರಿಸರ ದಿನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇಂದು ಪ್ರವಾಸೋದ್ಯಮದ ಮುಖ್ಯ ಅಂಶಗಳಾದ ಪರಿಸರ, ಜನರನ್ನು ಒಳಗೊಂಡು ಮುನ್ನಡೆಯಬೇಕಾಗಿದೆ. ಇಂದು ಅನಿಯಂತ್ರಿತ ಮತ್ತು ಯೋಜನಾ ರಹಿತ ನಗರೀಕರಣದಿಂದ ಇಂದು ಪ್ರವಾಸೋದ್ಯಮದ ಮೇಲೆ ಕರಾಳ ಛಾಯ ಮೂಡಿದೆ ಆದ್ದರಿಂದ ಇವತ್ತು ಪರಿಸರ ನೈರ್ಮಲ್ಯ, ಶಬ್ದಮಾಲಿನ್ಯ, ಜನಸಂದಣಿಯಂತಹ ಅಂಶಗಳು ಪ್ರವಾಸೋದ್ಯಮ ಬೆಳವಣಿಗೆಗೆ ಹಿನ್ನಡೆಯಾಗಿವೆ ಎಂದ ಅವರು ಉತ್ತರಖಂಡದ ಕಾಶಿ ಧಾರ್ಮಿಕ ಪ್ರವಾಸದ್ಯೋಮಕ್ಕೆ ಹೆಸರುವಾಸಿಯಾಗಿದ್ದು, ಅಲ್ಲಿ ಕಳೆದ ವರ್ಷಗಳಲ್ಲಿ ಮಿತಿಮೀ-ರಿದ ಪ್ರವಾಹದಿಂದ 5700 ಜನ ಮೃತಪಟ್ಟಿದ್ದು, ಅಲ್ಲಿಯ ನದಿದಂಡೆಗಳಲ್ಲಿ ಯೋಜನಾರಹಿತ ಕಟ್ಟಡಗಳ ನಿರ್ಮಾಣವೇ ಜನರ ಸಾವಿಗೆ ಕಾರಣ ಆದ್ದರಿಂದ ಇಂದು ಸುಸ್ಥಿರವಾಗಿ ಪ್ರವಾಸೋದ್ಯಮ ಅಭಿವೃದ್ಧಿ ಆಗಬೇಕಾದರೆ ಪ್ರವಾಸಿ ತಾಣಗಳಲ್ಲಿ ನೆಲೆಸಿರುವ ಜನರ ಒಳಗೊಳ್ಳುವಿಕೆ ಬಹಳ ಮುಖ್ಯ ಎಂದರು.

ಇಂದು ಪ್ರವಾಸದ್ಯೋಮ ಹೆಸರಿನಲ್ಲಿ ವಾಟರ್ ವರ್ಲ್ಡ್, ಅಮ್ಯುಸಿಯಂ ಪಾರ್ಕಗಳಿಗೆ 1 ಮಿಲಿಯನ್ ಲಿಟರ್ ನೀರು ಪೋಲಾಗುತ್ತಿದೆ ಮತ್ತು ಗಾಲ್ಫ್ ಅಂಗಳಕ್ಕೆ 2.5 ಮಿಲಿಯನ್ ಲಿಟರ್ ನೀರನ್ನು ಪ್ರವಾಸದ್ಯೋಮ ಹೆಸರಿನಲ್ಲಿ ವ್ಯರ್ಥವಾಗಿ ನಾವು ಇಂದು ಹಾಳುಮಾಡುತ್ತಿದ್ದೇವೆ ಎಂದ ವಿಷಾದಿಸಿದ ಅವರು ಇಂದು ಅನೇಕ ಪ್ರವಾಸೋದ್ಯಮ ತಾಣಗಳಲ್ಲಿ ಅಲ್ಲಿಯ ಸಂಪ್ರದಾಯ ಮತ್ತು ಜನರ ಜೀವನ ಶೈಲಿ ನಶಿಸುತ್ತಿರುವದು ಗಂಭೀರವಾದ ವಿಷಯವಾಗಿದೆ ಎಂದರು. ನೀತಿ ಆಯೋಗವು ಭಾರತದಲ್ಲಿರುವ 1,300 ದ್ವೀಪಗಳಲ್ಲಿ (ಐಲ್ಯಾಂಡಗಳು) ಕೇವಲ 110 ಮಾತ್ರ ಪ್ರವಾಸೋದ್ಯಮಕ್ಕೆ ಆಯ್ಕೆ ಮಾಡಿದೆ ಎಂದು ವಿವರಿಸಿದ ಅವರು ಸುಸ್ಥರವಾದ ಪ್ರವಾಸೋದ್ಯಮ ಹೊಂದಲು ಅಲ್ಲಿಯ ಜನರ ಅಭಿರುಚಿ ಮತ್ತು ಅವರ ಒಳಗೊಳ್ಳುವಿಕೆಯಿಂದ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಈಕ್ವೇಶನ್ಸ್‌ನ ಕಾರ್ಯಕ್ರಮ ಸಹ ಅಧಿಕಾರಿ ಮತ್ತು ಸಂಪನ್ಮೂಲ ವ್ಯಕ್ತಿ ಕವಿತಾ ಎನ್ ಮಾತನಾಡಿ ಸುಸ್ಥಿರ ಪ್ರವಾಸೋದ್ಯಮ ಬೆಳವಣಿಗೆ ಹೊಂದಬೇಕಾದರೆ ಸ್ಥಳಿಯ ಮಟ್ಟದಲ್ಲಿರುವ ಸಮುದಾಯಗಳಿಗೆ ಸಹಾಯ ಮಾಡುವುದರ ಜೊತೆಗೆ ಅವರನ್ನು ಸಹ ಮುಖ್ಯವಾಹಿನಿಗೆ ತರುವಲ್ಲಿ ಅನೇಕ ಯೋಜನೆಗಳ ಮುಖಾಂತರ ಸಾಧ್ಯ ಆದ್ದರಿಂದ ಇಂದು ಕೆಲವೊಂದು ಅರಣ್ಯವಲಯದಲ್ಲಿ ಅಲ್ಲಿಯ ವಾಸಿಸುತ್ತಿರುವ ಬುಡಕಟ್ಟು ಜನರು ಪ್ರವಾಸೋದ್ಯಮವನ್ನು ವಿರೋಧಿಸಲು ಮುಖ್ಯ ಕಾರಣ ಪ್ರವಾಸಿಗರ ಜೊತೆ ಸಂಘರ್ಷ ಒತ್ತಾಯಪೂರ್ವಕವಾಗಿ ಸಂಪ್ರದಾಯದ ಹೇರಿಕೆ ಮುಂತಾದ ಅಂಶಗಳು ಕಾರಣ ಆದ್ದರಿಂದ ಸರಕಾರಗಳು ಪ್ರವಾಸದ್ಯೋಮದಿಂದ ಸ್ಥಳಿಯ ಜನರಿಗೆ ಸಹಕಾ-ರಿಯಾಗುವ ರೀತಿಯಲ್ಲಿ ಸಾರ್ವಜನಿಕರ ಸಹಯೋಗದಲ್ಲಿ ಪ್ರವಾಸೋದ್ಯಮವನ್ನು ಪ್ರವಾಸೋದ್ಯಮವನ್ನು ಬೆಳಸಬೇಕಾಗಿದೆ ಎಂದರು.



ಬೆಂಗಳೂರಿನ ಇಕ್ವೇಶನ್ಸ್ ಪ್ರವಾಸೋದ್ಯಮ ಕೇಂದ್ರದ ಕಾರ್ಯಕ್ರಮ ಸಂಯೋಜಕಿ ನಿನೋ ಚಾರ್ಲ್ಸ್ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಸ್ನಾತ್ತಕೋತ್ತರ ಪ್ರವಾಸೋದ್ಯಮ ವಿಭಾಗದ 'ಭುವನ ವಿಜಯ' ಸಭಾಂಗಣದಲ್ಲಿ ಆಯೋಜಿಸಿದ ವಿಶ್ವ ಪರಿಸರ ದಿನವನ್ನು ಉದ್ಘಾಟಿಸುತ್ತಿರುವದು.

ಸಮಾರಂಭದ ಅಧ್ಯಕ್ಷತೆಯನ್ನು ಡಾ. ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ ಎಸ್ ರಾಜಶೇಖರ ಮತ್ತು ಧಾರವಾಡ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಮಲ್ಲಿಕಾರ್ಜುನ ಭಜಂತ್ರಿ ಮತ್ತು ಪ್ರವಾಸೋದ್ಯಮ ವಿಭಾಗದ ಪ್ರಾಧ್ಯಾಪಕ ವೃಂದ ಉಪಸ್ಥಿತರಿದ್ದರು. ಕರ್ನಾಟಕ ಕಾಲೇಜಿನ ಪ್ರವಾಸೋದ್ಯಮ ವಿಭಾಗದ ಸಂಯೋಜಕರಾದ ಡಾ ಕೆ. ಜಗದೀಶ್ ಅತಿಥಿಗಳನ್ನು ಪರಿಚಯಿಸಿದರು. ಸನಾ ಖಾನ್ ಕಾರ್ಯಕ್ರಮವನ್ನು ನಿರೂಪಿಸಿದರು. ಗೋವರ್ಧನ್ ಭಟ್ಟ ವಂದಿಸಿದರು.

ಹೇಮ್ ಕುಮಾರ್
-3 ನೇ ಸೆಮಿಸ್ಟರ್

# ಸಂಸ್ಕೃತ ಭಾಷೆ ಎಲ್ಲಾ ಭಾಷೆಗಳಿಗೆ ಮೂಲ



ನಗರದಕರ್ನಾಟಕ ಕಲಾ ಮಹಾವಿದ್ಯಾಲಯದದಲ್ಲಿ ಆಯೋಜಿಸಿದಈ ಎರಡು ದಿನಗಳ ಸಂಸ್ಕ್ರತ ವಸ್ತುಪ್ರದರ್ಶನವನ್ನುಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಪ್ರಮೋದ ಗಾಯಿ ಉದ್ಘಾಟಿಸಿದರು.

ಕಲೆಯಎಲ್ಲಾ ಪ್ರಕಾರಗಳು ವಿಜ್ಞಾನವೇ ಆಗಿವೆ. ಆದ್ದರಿಂದ ಪ್ರಾಚೀನ ಗ್ರಂಥಶಾಸನಗಳನ್ನು ಋಷಿ ಮುನಿಗಳು ವೈಜ್ಞಾನಿಕವಾಗಿ ಸಂಸ್ಕ್ರತ ಭಾಷೆಯನ್ನು ನೀಡಿದ್ದಾರೆ.ಎಂದು ಧಾರವಾಡದ ಕರ್ನಾಟಕಇತಿಹಾಸ ಮಂಡಳಿಯ ಕಾರ್ಯಾಧ್ಯಕ್ಷರಾದ ಆರ್.ಪಂಚಮುಖಿ ಅಭಿಪ್ರಾಯಪಟ್ಟರು.ಅವರುಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಸಂಸ್ಕೃತ, ಪ್ರಾಕೃತ ಹಾಗೂ ಯೋಗಅಧ್ಯಯನ ವಿಭಾಗದ ವತಿಯಿಂದ ವಿ.ಕೆ.ಗೋಕಾಕ ಗ್ರಂಥಾಲಯದಲ್ಲಿ ಸುಂಸಂಸ್ಕ್ರತ ಸುಜ್ಞಾನ ವೈಭವಮ್ ಎಂಬ ಎರಡು ದಿನಗಳ ವಸ್ತು ಪ್ರದರ್ಶನದಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇಂದು ಸಂಸ್ಕ್ರತ ಭಾಷೆಯೂಎಲ್ಲಾ ಭಾಷೆಗಳಿಗೆ ಮೂಲ ಭಾಷೆಯಾಗಿದ್ದು ,ಇಂದು ಈ ಭಾಷೆಯನ್ನುಅಧ್ಯಯನ ಮಾಡುವುದುಅವಶ್ಯಕವಾಗಿದೆಎಂದರು.

ಈ ಎರಡು ದಿನಗಳ ಸಂಸ್ಕ್ರತ ವಸ್ತುಪ್ರದರ್ಶನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಪ್ರಮೋದ ಗಾಯಿ ಉದ್ಘಾಟಿಸಿದರು. ಕಾರ್ಯಕ್ರಮದಅಧ್ಯಕ್ಷತೆಯನ್ನು ವಹಿಸಿದ್ದ ಡಾರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಸಂಸ್ಕೃತ ಭಾಷೆಯುಎಲ್ಲ ಭಾಷೆಗಳಿಗೆ ಪರಂಪರೆಯನ್ನು ನೀಡದೆ ಮತ್ತು ಈ ಭಾಷೆಯು ವೈಜ್ಞಾನಿಕ ಪ್ರಾಚೀನ ಭಾಷೆಯಾಗಿದೆಎಂದರು. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಸಿ.ಎಫ್.ಮೂಲಿಮನಿ ವೇದಿಕೆಯಲ್ಲಿದ್ದರು.ಕಾರ್ಯಕ್ರಮದಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾರಜನಿ ಎಚ್ ಅತಿಥಿಗಳನ್ನು ಸ್ವಾಗತಿಸಿದರು.ಪ್ರಾಧ್ಯಾಪಕರಾದ 'ಡಾ.ಎ.ಆರ್.ಯಾರ್ದಿ, ಡಾ.ಸುಜಾತಾಎನ್, ರವಿ ಜೋಶಿ, ಪ್ರೇಮಾ ನಡಕಟ್ಟಿ,ಡಾ.ಚಂದ್ರು ಲಮಾನಿ ,ಡಾ.ಅನ್ನಪೂರ್ಣ ಹೆಗಡೆ , ಪ್ರಕಾಶ ಹೆಗಡೆಕಾರ್ಯಕ್ರಮದಲ್ಲಿಇದ್ದರು.

ಸೌಮ್ಯ ಕುಲಕರ್ಣಿ
-3 ನೇ ಸೆಮಿಸ್ಟರ್

# ಮಹಾತ್ಮ ಗಾಂಧೀಜಿ ಜೀವನ ಪ್ರತಿಯೊಬ್ಬರಿಗೂ ಮಾದರಿ: ಪರಮಗೌಡ ಎಲ್. ಹರಕಂಗಿ




**ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಪರಮಗೌಡ ಎಲ್. ಹರಕಂಗಿ ಗಾಂಧಿ ಜಯಂತಿ ನಿಮಿತ್ತ ಒಂದು ದಿನದ ಕಾರ್ಯಗಾರದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತಾನಾಡುತ್ತಿರುವುದು.**

ಗಾಂಧೀಜಿ ಜಾಗತಿಕ ಮನುಷ್ಯ, ಅಹಿಂಸೆ ಮತ್ತು ತತ್ವವನ್ನು ಪ್ರಚೋದನಕವಾಗಿ ದೇಶಕ್ಕೆ ಒಳ್ಳೆಯ ಅಭಿಪ್ರಾಯ ಮೂಡಿಸಿರುವಂತಹ ವ್ಯಕ್ತಿ. ನಾವೆಲ್ಲರೂ ಒಂದೇ ಎಂದು ಭಾವಿಸಿ "ನನ್ನ ಜೀವನವೇ ನನ್ನ ಸಂದೇಶ" ಎಂದು ದೇಶಕ್ಕೆ ಮಹಾತ್ಮಾನಾಗಿ ರಾಷ್ಟ್ರಪಿತನಾಗಿ ಎಲ್ಲದಕ್ಕೂ ಆದರ್ಶ ವ್ಯಕ್ತಿಯಾಗಿ ತಮ್ಮ ಬದುಕಿನುದ್ದಕ್ಕೂ ಹೋರಾಟ ತತ್ವ ಮತ್ತು ಅಹಿಂಸೆಯ ನಡುವೆ ತಮ್ಮ ಜೀವನವನ್ನು ದೇಶಕ್ಕೆ ಪಣ ಇಟ್ಟರು ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಪರಮಗೌಡ ಎಲ್. ಹರಕಂಗಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಸಭಾಂಗಣದಲ್ಲಿ ನಡೆದ ಕರ್ನಾಟಕ ಕಲಾ ಮಹಾವಿದ್ಯಾಲಯ ಜಿಮಖಾನಾ ಆಯೋಜಿಸಿದ ಗಾಂಧಿ ಜಯಂತಿ ನಿಮಿತ್ತ ಒಂದು ದಿನದ ಕಾರ್ಯಗಾರದಲ್ಲಿ "ನಮಗೆ ಗಾಂಧಿ ಏಕೆ ಬೇಕು?" ಎಂಬ ವಿಷಯದ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರರಾದ ಪರಮಗೌಡ ಎಲ್. ಹರಕಂಗಿ ಮಾತನಾಡಿ ಮನುಷ್ಯನಿಗೆ ಮಾನವೀಯತೆ ಬೇಕೆಂದರೆ ಅವನ ಗಳಿಸುವಿಕೆಯಲ್ಲಿ ಆಸ್ತಿ, ಅಂತಸ್ತು ನೆಮ್ಮದಿ ಸಿಗದು. ಅವರೆಲ್ಲರ ಜೊತೆಗೆ ಗೌರವ, ಆಯಸ್ಸು, ದೇಶಾಭಿಮಾನ, ದೇಶಪ್ರೇಮದಲ್ಲಿ ಅವನ ಸಂಪಾದನೆ ದೊಡ್ಡದು ಎಂದು ಪರಮಗೌಡ ಎಲ್. ಹರಕಂಗಿ ತಮ್ಮ 90 ನೇ ವಯಸ್ಸಿನಲ್ಲೂ ಕವನದ ಮೂಲಕ ತಮ್ಮ ಮಾತುಗಳನ್ನು ವ್ಯಕ್ತಪಡಿಸಿದರು. ಅಲ್ಲದೇ ತಾವೇ ರಚಿಸಿದ "ಸಂಗ್ರಾಮದ ನೆನಪುಗಳು" ಎಂಬ ಪುಸ್ತಕದ ಕೆಲವು ಸಂಗತಿಗಳನ್ನು ಹಂಚಿಕೊಂಡರು.

ತದನಂತರ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ಶಿವಾನಂದ ಶೆಟ್ಟರ ಮಾತನಾಡಿ ಇಂದಿನ ಯುವಜನತೆಯಲ್ಲಿ ದೇಶ ಭಕ್ತಿ ಸಾಮಾಜಿ-ಕ ಜಾಲತಾಣಗಳಿಗೆ ಸೀಮಿತವಾಗಿದ್ದು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಪತ್ರಕೆಗಳಲ್ಲಿ ಎಲ್ಲರೂ ಓದುತ್ತಾರೆ. ಆದರೆ ದೇಶಪ್ರೇಮ ಕೇವಲ ಜನರ ಬಾಯಿ ಮಾತಿನಲ್ಲಿದ್ದು ಭಾವನೆ ಹಾಗೂ ಹೃದಯಗಳಲ್ಲಿ ಇಲ್ಲವಾಗಿದೆ ಎಂದು ವಿಷಾದಿಸಿದರು. ಸ್ವತಂತ್ರ್ಯ ಹೋರಾಟಕ್ಕಾಗಿ ಗಾಂಧಿಜಿ ಆಯ್ಕೆ ಮಾಡಿದ ನಾಯಕರಲ್ಲಿ ಜಿಲ್ಲೆಯ ಮೈಲಾರ ಮಹದೇವಪ್ಪನವರು ಒಬ್ಬರು ಎಂಬುದು ಜಿಲ್ಲೆಯ ಜನತೆ ಹೆಮ್ಮೆ ಪಡುವ ಸಂಗತಿಯಾಗಿದೆ ಎಂದ ಅವರು ಕರ್ನಾಟಕದಲ್ಲಿ ಸ್ವತಂತ್ರ್ಯ ಹೋರಾಟಕ್ಕಾಗಿ ನಿರ್ಮಿಸಿದ ಕರಡೂರು ಆಶ್ರಯಧಾಮ ಕರ್ನಾಟಕದಲ್ಲೇ ಪ್ರಸಿದ್ಧಿ ಪಡೆದಿದೆ. ದೇಶದ ಸ್ವತಂತ್ರ್ಯಕ್ಕೆ ಶ್ರಮಿಸಿದ ಕರ್ನಾಟಕದ ಭಗತ್ ಸಿಂಗ್ ಎಂದೇ ಪ್ರಸಿದ್ಧ ಪಡೆದ ಮೈಲಾರ ಮಹದೇವಪ್ಪನವರು ಇಂದಿನ ಯುವಜನರಿಗೆ ಸ್ಫೂರ್ತಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಖ್ಯಾತ ಸ್ತ್ರೀ ರೋಗ ತಜ್ಞರು ಪರಿಸರವಾದಿಗಳಾದ ಡಾ. ಸಂಜೀವ ಕುಲಕರ್ಣಿ ಗಾಂಧಿ ತತ್ವ ಅಂತ ಎಷ್ಟೋ ಜನ ಗಾಂಧಿಗಾಗಿ ಕೆಲಸ ಮಾಡಿದ್ದಾರೆ. ನಾವೆಲ್ಲರೂ ಗಾಂಧಿ ತತ್ವವನ್ನು ಪಾಲಿಸುವಂತವರಾಗಬೇಕು. ವಿರೋಧ ಮತ್ತು ಭಿನ್ನಾಭಿಪ್ರಾಯ ಎಲ್ಲ ಕಡೆಯೂ ಕಂಡು ಬರುತ್ತದೆ. ಅದನ್ನು ಅರಿತು ಅದರ ವಿರುದ್ಧ ಧ್ವನಿ ಎತ್ತುವ ಕೆಲಸ ಯುವಕರಲ್ಲಿ ಮೂಡಬೇಕು. ಈ ದೇಶಕ್ಕೆ ಖಾದಿ ಉಡುಪು ಗಾಂಧಿಯಿಂದಲೇ ಬಂದಿದ್ದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನ ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ರಾಜೇಶ್ವರಿ ಮಹೇಶ್ವರಯ್ಯನವರು ಪ್ರಾಥ-'ಮಿಕ ಶಿಕ್ಷಣದಲ್ಲಿರುವ ಗಾಂಧಿ ಮೇಲಿನ ಪ್ರೀತಿ ಈಗಿನ ಯುವಜನರಲ್ಲಿ ಇಲ್ಲದಂತಾಗಿದೆ ಅದಕ್ಕೆ ಮೋಹನ್ ಗಾಂಧಿಯಿಂದ ಹಿಡಿದು ಮಹಾತ್ಮ ಗಾಂಧಿಯವರೆಗೆ ಅವರು ಬದುಕಿ ಬಂದ ಹೋರಾಟದ ಜೀವನ ದೇಶಪ್ರೇಮವನ್ನರಿತು ಇಂದಿನ ಯುವ ಜನರು ಅವರ ಜೀವನದ ಸಂದೇಶವನ್ನ ಮೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸಿ.ಎಫ್. ಮೂಲಿಮನಿ, ಕಾರ್ಯಧ್ಯಕ್ಷರಾದ ಅರುಣಾ ಹಳ್ಳಿಕೇರಿ, ಉಪಾಧ್ಯಕ್ಷರಾದ ಬಿ.ಎಫ್.ಚಾಕಲಬ್ಬಿ ಸೇರಿದಂತೆ ಕಾಲೇಜಿನ ಕೆಲ ಶಿಕ್ಷಕ ವೃಂದ ನೆರೆದಿದ್ದರು. ಕಾರ್ಯಕ್ರಮವನ್ನು ವಿ.ಬಿ.ಸಾವಿರಮಠ ನಿರೂಪಿಸಿದರು. ಶ್ರೀಹರಿ

–5ನೇ ಸೆಮಿಸ್ಟರ್

# ಐತಿಹಾಸಿಕ ಮಹಾನ್ ಕಾಲೇಜು ಇದಾಗಿದೆ: ಡಾ. ಅನಿಲ ಗೋಕಾಕ

ನಾನು ಮತ್ತು ನನ್ನ ತಂದೆ ಅಧ್ಯಯನ ಮಾಡಿದ ಐತಿಹಾಸಿಕ ಮಹಾನ್ ಕಾಲೇಜು ಇದಾಗಿದೆ ಎಂದು ನಿವೃತ್ತ ಐ.ಎ.ಎಸ್ ಅಧಿಕಾರಿ ಮತ್ತು ವಿ.ಕೃ. ಗೋಕಾಕ ಪುತ್ರ ಡಾ. ಅನಿಲ ಗೋಕಾಕ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಕರ್ನಾಟಕ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ಕರ್ನಾಟಕ ಕಾಲೇಜಿನ ಹಿಂದಿನ ವಿದ್ಯಾರ್ಥಿಗಳ ಸಂಘ ಆಯೋಜಿಸಿದ ಪ್ರತಿಭಾ ಪುರಸ್ಕಾರ ಮತ್ತು "ನನ್ನ ಕರ್ನಾಟಕ ಕಾಲೇಜು" ಎಂಬ ಉಪನ್ಯಾಸ ಸರಣಿ ಮಾಲಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಬ್ರಿಟಿಷ್ ಪ್ರಾಚಾರ್ಯರಾದ ಫ್ಯಾರನ್ ಮತ್ತು ನನ್ನ ತಂದೆ ವಿ.ಕೃ.ಗೋಕಾಕ ಉತ್ತಮ ಆತ್ಮೀಯ ಸಂಬಂಧವನ್ನು ಹೊಂದಿದ್ದರು ಎಂದ ಅವರು ಕರ್ನಾಟಕ ಕಾಲೇಜಿನಲ್ಲಿರುವ ಫ್ಯಾರನ್ ಸಭಾಂಗಣವು ಮೊದಲು ಗ್ರಂಥಾಲಯ ಹೊಂದಿದ್ದು, ಈಗ ಅದು ಫ್ಯಾರನ್ ಸಭಾಂಗಣವೆಂದು ನಾಮಕರಣ ಮಾಡಿರುವದು ಶ್ಲಾಘನೀಯ ಎಂದ ಅವರು ವಿ.ಕೃ. ಗೋಕಾಕ ಅವರು ಕರ್ನಾಟಕ ಕಾಲೇಜು ಹೊರತರುವ ಮೀಸಲೇನಿಯಲ್ಲಿ ಧಾರವಾಡದ ಕರ್ನಾಟಕ ಕಾಲೇಜನ್ನು ಸಂಸ್ಕೃತಿಯ ಪ್ರತೀಕ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ ಕುರಿತು ಆಗಲೇ ಉಲ್ಲೇಖಿಸಿದ್ದು ಅವರ ಒಂದು ದೂರದೃಷ್ಟಿಯಿಂದ ಕೂಡಿತ್ತು ಎಂದು ವಿವರಿಸಿದರು.

ವಿ.ಕೃ.ಗೋಕಾಕ ಅವರು ಶಿವರಾಮ ಕಾರಂತ, ಮತ್ತು ಕೈಲಾಸಂ ಅವರನ್ನು ಭೆಟ್ಟಿಯಾಗಿದ್ದಾಗಿ ಗೋಕಾಕರು ತಮ್ಮ ಕವನಗಳ ಮುಖಾಂತರ ದಾಖಲಿಸಿದ್ದಾರೆ ಎಂದರು. ನಾನು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ್ ಸಿದ್ದಲಿಂಗ ಪಟ್ಟಣಶೆಟ್ಟಿ ನನ್ನ ಸಹಪಾಠಿಗಳಾದ್ದರು ಮತ್ತು ಈ ಕಾಲೇಜಿನಲ್ಲಿ ಅನೇಕ ಪ್ರತಿಭಾವಂತ ಶಿಕ್ಷಕರ ವರ್ಗದಿಂದ ನಮ್ಮ ಜ್ಞಾನ ಹೆಚ್ಚಿಸಕೊಳ್ಳಲು ಸಹಾಯಕವಾಯಿತು ಎಂದ ಅವರು ನಾವು ಓದುತ್ತಿದ್ದಾಗ ಕಾಲೇಜಿನ ಕ್ಯಾಂಟೀನ್‌ನಲ್ಲಿ ಹರಟೆ ಮತ್ತು ಚೇಷ್ಟೆಗಳನ್ನು ಮಾಡುತ್ತಿದ್ದದನ್ನು ಸ್ಮರಿಸಿದ ಅವರು. ಜಯಪ್ರಕಾಶ ನಾರಾಯಾಣ ಮತ್ತು ಬೀಚಿ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಬಂದು ಭಾಷಣ ಮಾಡಿದ್ದು ಅವಿಸ್ಮರಣೆಯ ಘಳಿಗೆ ಎಂದು ಮೇಲಕು ಹಾಕಿದರು.

ಕರ್ನಾಟಕ ಕಾಲೇಜಿನಲ್ಲಿ ಕಲಿತ ಬಿ,ಎ, ಬಿ.ಕಾಂ, ಬಿ.ಸಿ.ಎ, ಬಿ.ಬಿ.ಎ ಮತ್ತು ಬಿ.ಎ.ಮ್ಯೂಸಿಕ್ ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಕಳೆದ ವರ್ಷದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ನಗದು ಬಹುಮಾನವನ್ನು ಡಾ ಅನಿಲ ಗೋಕಾಕ ವಿತರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿಮರ್ಶಕ ಡಾ ಗಿರಡ್ಡಿ ಗೋವಿಂದರಾಜ ಮಾತನಾಡಿ ನಾವು ಕಲಿಯುತ್ತಿದ್ದ ಸಂದರ್ಭದಲ್ಲಿ ವಿ.ಕೃ.ಗೋಕಾಕರು ಪ್ರಾಚಾರ್ಯರಾಗಿದ್ದರು. ಅವರನ್ನು ವಿದ್ಯಾರ್ಥಿಗಳು ಬಹಳ ಗೌರವದಿಂದ ಕಾಣುತ್ತಿದ್ದರು ಮತ್ತು ಅವರು ಒಬ್ಬ ಉತ್ತಮ ಶಿಕ್ಷಕನಾಗಿದ್ದು ಎಂದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ನಾಡಿಗೆ ಮತ್ತು ದೇಶಕ್ಕೆ ಹಲವಾರು ಸಾಹಿತಿ,ಬರಹಗಾರ,ಅಧಿಕಾರಿಗಳನ್ನು ನೀಡಿದ ಹೆಮ್ಮೆ ಈ ಕಾಲೇಜಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಡಾ ಆರ್ ಎಲ್ ಜಾಡರ್ ಪ್ರಾಸ್ತಾವಿಕವಾಗಿ ಮಾತನಡಾದರು. ಡಾ ಮುಳಗುಂದ ಮತ್ತು ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಮತ್ತು ಕಾಲೇಜಿನ ಹಲವಾರು ಹಿಂದಿನ ವಿದ್ಯಾರ್ಥಿಗಳು ಹಾಜರಿದ್ದರು. ಇದಕ್ಕೂ ಮೊದಲು ಹಳೆಯ ವಿದ್ಯಾರ್ಥಿಗಳು ಸೇರಿ ಶತಮಾನೋತ್ಸವದ ಆಚರಣೆಯ ನಿಮಿತ್ಯ ಹಲವಾರು ಕಾರ್ಯಕ್ರಮಗಳನ್ನು ಕಾಲೇಜಿನಲ್ಲಿ ಆಯೋಜಿಸಲು ತಿರ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಡಾ. ಮುಕುಂದ ಲಮಾಣಿ ನಿರೂಪಿಸಿದರು. ಡಾ ರಾಜೇಶ್ವರಿ ಕೆಂಚಪ್ಪನ್ನವರ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಡಾ ಬಿ.ಎಫ್.ಚಾಕಲಬ್ಬಿ ವಂದಿಸಿದರು.

ಶ್ರೀ ನಿವಾಸ್
ಗುಳೇದ್
–5ನೇ ಸೆಮಿಸ್ಟರ್




**ನಿವೃತ್ತ ಐ.ಎ.ಎಸ್ ಅಧಿಕಾರಿ ಮತ್ತು ವಿ.ಕೃ.ಗೋಕಾಕ ಪುತ್ರ ಡಾ. ಅನಿಲ ಗೋಕಾಕ ಅವರು ಕರ್ನಾಟಕ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ಕರ್ನಾಟಕ ಕಾಲೇಜಿನ ಹಿಂದಿನ ವಿದ್ಯಾರ್ಥಿಗಳ ಸಂಘ ಆಯೋಜಿಸಿದ ಪ್ರತಿಭಾ ಪುರಸ್ಕಾರ ಮತ್ತು "ನನ್ನ ಕರ್ನಾಟಕ ಕಾಲೇಜು" ಎಂಬ ಉಪನ್ಯಾಸ ಸರಣಿ ಮಾಲಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿರವದು.**

ಗೌರವ ಸಂಪಾದಕರು: ಪ್ರಾಚಾರ್ಯರು ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. **ಪುಟ ವಿನ್ಯಾಸ: ಶ್ರೀಹರಿ.**